# ಕಣ್ಣು ಕೊಡಿ, ಮಣ್ಣು ಮಾಡಬೇಡಿ...

**-ಡಾ. ಭುಜಂಗ ಶೆಟ್ಟಿ**
ಬೆಂಗಳೂರಿನ 'ನಾರಾಯಣ ನೇತ್ರಾಲಯ'ದ ಅಧ್ಯಕ್ಷರು

**ನೇತ್ರದಾನ** ಮಾಡುವುದು ಒಂದು ಪವಿತ್ರ ಕೆಲಸ. ಮಹಿಳೆ–ಪುರುಷ, ಆರೋಗ್ಯವಂತ–ರೋಗಿ, ದೊಡ್ಡವರು–ಚಿಕ್ಕವರು ಎಂಬ ಭೇದವಿಲ್ಲದೆ ಎಲ್ಲ ವಯೋಮಾನದವರೂ ತಮ್ಮ ಕಣ್ಣುಗಳನ್ನು ದಾನ ಮಾಡಬಹುದು. ನೇತ್ರದಾನವನ್ನು ನಾವು ಪ್ರೋತ್ಸಾಹಿಸಬೇಕು, ಅರಿವು ಮೂಡಿಸಬೇಕು, ದೃಷ್ಟಿಹೀನರ ಬಾಳಲ್ಲಿ ಬೆಳಕು ಮೂಡಿಸಬೇಕು. ಹೀಗಾಗಿ, ಕಣ್ಣುಗಳನ್ನು ದಾನ ಮಾಡಿ, ಮಣ್ಣು ಮಾಡಬೇಡಿ!.

ನಮ್ಮ ರಾಜ್ಯದಲ್ಲಿ ಕಣ್ಣುಕಸಿಯನ್ನು ಸುಮಾರು ನಲವತ್ತು ವರ್ಷಗಳ ಹಿಂದೆಯೇ ಮಾಡಲಾಗುತ್ತಿತ್ತು. 1980–81ರಲ್ಲಿ ನಾನು 'ಮಿಂಟೊ ಕಣ್ಣಿನ ಆಸ್ಪತ್ರೆ'ಯಲ್ಲಿ ಓದುತ್ತಿರುವಾಗ ದಾನಿಯಿಂದ ಪಡೆದ ಕಣ್ಣುಗಳು ಶ್ರೀಲಂಕಾದಿಂದ ಬರುತ್ತಿದ್ದವು. ಅಲ್ಲಿನ ಬೌದ್ಧ ಧರ್ಮೀಯರಲ್ಲಿ, ಸತ್ತ ಮೇಲೆ ಏನಾದರೂ ಒಂದು ಅಂಗ ದಾನ ಮಾಡಲೇಬೇಕು, ಆಗಲೇ ಮುಕ್ತಿ ಎನ್ನುವ ನಂಬಿಕೆಯಿದೆ. ಹೀಗಾಗಿ ಎಲ್ಲರೂ ಕಣ್ಣುದಾನ ಮಾಡೋರು. ಆಗ ನನಗೆ, ಇಷ್ಟು ಚಿಕ್ಕ ದೇಶದ ಮಂದಿ ಕಣ್ಣುಗಳನ್ನು ದಾನ ಮಾಡಿ ಬೇರೆಯವರಿಗೆ ಬೆಳಕಾಗುತ್ತಿದ್ದರೆ ನಾವು ಯಾಕೆ ಮಾಡಬಾರದು ಅನಿಸುತ್ತಿತ್ತು.

ನಮ್ಮಲ್ಲೂ ನೇತ್ರದಾನದ ಅರಿವು ಮೂಡಿಸಬೇಕು ಎಂದು ಮನಸ್ಸಾಯಿತು. ಆಗ ನೇತ್ರದಾನದ ಪ್ರಚಾರಕ್ಕೆ ಡಾ. ರಾಜ್‌ಕುಮಾರ್ ಅವರನ್ನೇ ಹಿಡಿದರೆ ಸೂಕ್ತ ಎಂದು ಲೆಕ್ಕ ಹಾಕಿದೆ. ಇದಾಗಿ ಆರು ತಿಂಗಳ ಬಳಿಕ ಅವರ ಅಕ್ಕನಿಗೆ ಕಣ್ಣಿನ ಸಮಸ್ಯೆ ಬಂತು. ತಪಾಸಣೆಗಾಗಿ ಅವರನ್ನು ನಾರಾಯಣ ನೇತ್ರಾಲಯಕ್ಕೆ ಕರೆದುಕೊಂಡು ಬಂದಿದ್ದರು. ಆಗ ಅವರ ಬಳಿ – 'ನಮ್ಮಲ್ಲಿ ನೇತ್ರದಾನದ ಅರಿವು ಇಲ್ಲ. ನಿಮ್ಮ ಬೆಂಬಲ ಬೇಕು' ಎಂದೆ. 1994ರಲ್ಲಿ ನಮ್ಮ ಆಸ್ಪತ್ರೆಯಲ್ಲಿ 'ಡಾ. ರಾಜ್‌ಕುಮಾರ್ ನೇತ್ರದಾನ ಕೇಂದ್ರ' ಆರಂಭಿಸಿದೆವು. ಡಾ. ರಾಜ್ ಅವರೇ ಈ ಕೇಂದ್ರವನ್ನು ಉದ್ಘಾಟಿಸಿದರು. ಆಗಲೇ ತಮ್ಮ ಕಣ್ಣು, ಪತ್ನಿ, ಮಕ್ಕಳ, ಇಡೀ ಕುಟುಂಬದ ಕಣ್ಣುಗಳನ್ನು ದಾನ ಮಾಡುವುದಾಗಿ ಪ್ರತಿಜ್ಞೆ ಮಾಡಿದರು.

ರಾಜ್‌ಕುಮಾರ್ ತಮ್ಮ ಕಣ್ಣುಗಳನ್ನು ದಾನ ಮಾಡುವುದಾಗಿ ವಾಗ್ದಾನ ನೀಡಿದ ಬಳಿಕ ರಾಜ್ಯದಲ್ಲಿ ನೇತ್ರದಾನದ ಬಗ್ಗೆ ಅರಿವು ಹೆಚ್ಚಾಯಿತು. ರಾಜ್ ಹೇಳಿದಂತೆ ಅವರು ತೀರಿಹೋದ ಕೂಡಲೇ ರಾಘವೇಂದ್ರ ರಾಜ್‌ಕುಮಾರ್ ನನಗೆ ಫೋನ್ ಮಾಡಿದ್ರು. ನಾವು ಹೋಗಿ ಅವರ ಕಣ್ಣುಗಳನ್ನು ತೆಗೆದುಕೊಂಡು ಬಂದೆವು. ಇಬ್ಬರಿಗೆ ರಾಜ್ ಕಣ್ಣುಗಳನ್ನು ಕಸಿ ಮಾಡಿದೆವು. 2017ರಲ್ಲಿ ಪಾರ್ವತಮ್ಮ ಅವರ ಕಣ್ಣು, ಕಳೆದ ವರ್ಷ ಪುನೀತ್ ಅವರ ಕಣ್ಣುಗಳನ್ನು ಪಡೆದೆವು. ಪುನೀತ್ ಕಣ್ಣುಗಳ ಕಾರ್ನಿಯಾಗಳನ್ನು ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ನಾಲ್ಕು ಜನರಿಗೆ ಕಸಿ ಮಾಡಿದ್ದೇವೆ. ಕಾರ್ನಿಯಾದ ಮೇಲ್ಭಾಗ, ಕೆಳಭಾಗಗಳನ್ನು ಪ್ರತ್ಯೇಕಿಸಿ ಬೇರೆ ಬೇರೆಯವರಿಗೆ ಅಳವಡಿಸಿದೆವು. ಈ ತಂತ್ರಜ್ಞಾನ ಕರ್ನಾಟಕದಲ್ಲೇ ಮೊದಲನೆಯದು.

ನೇತ್ರದಾನ ಕೇಂದ್ರ ಆರಂಭವಾದ ಬಳಿಕ ಕಳೆದ 28 ವರ್ಷಗಳಲ್ಲಿ ಸಾವಿರಾರು ಮಂದಿ ಕಣ್ಣುಗಳನ್ನು ದಾನ ಮಾಡಿದ್ದಾರೆ. 65 ಸಾವಿರ ಮಂದಿ ದಾನ ಮಾಡುವುದಾಗಿ ಸಹಿ ಹಾಕಿ ನೋಂದಣಿ ಮಾಡಿದ್ದಾರೆ.

ಪುನೀತ್ ಕಣ್ಣುಗಳು ದಾನ ಮಾಡಿದ ಮೇಲೆ ಸಾವಿರಾರು ಜನರು ಬಂದು ನೇತ್ರದಾನ ಮಾಡುವುದಾಗಿ ಕೇಳ್ಕೊಂಡು ಆಸ್ಪತ್ರೆಗೆ ಬಂದ್ರು. ಹೀಗಾಗಿ ಆನ್‌ಲೈನ್‌ನಲ್ಲೇ ರಿಜಿಸ್ಟರ್ ಮಾಡಲು ವ್ಯವಸ್ಥೆ ಮಾಡಿದೆವು. 8884018800 – ಈ ನಂಬರ್‌ಗೆ ಕಾಲ್ ಮಾಡಿದರೆ ದಾನಿಗಳ ಫೋನ್‌ಗೆ ಒಂದು ಅರ್ಜಿ



ಕಣ್ಣು, ಪಿತ್ತಜನಕಾಂಗ, ಶ್ವಾಸಕೋಶ ಮುಂತಾದ ಅಂಗಗಳನ್ನು ದಾನ ಮಾಡಬಹುದು ಎಂದು, ರಾಜ್ಯ ಅಂಗಾಂಗ ದಾನಕ್ಕೆ ನೋಡಲ್ ಸಂಸ್ಥೆಯಾಗಿರುವ 'ಜೀವ ಸಾರ್ಥಕತೆ' ಸಂಸ್ಥೆಯ ಅಂಗಕಸಿ ಸಂಯೋಜಕ ನೌಷಾದ್ ಪಾಶ ಹೇಳುತ್ತಾರೆ.

'ಬದಲಿ ಅಂಗಾಂಗಗಳ ಅವಶ್ಯಕತೆ ದಿನೇ ದಿನೇ ಹೆಚ್ಚಾಗುತ್ತಿದೆ. ಹೀಗಾಗಿ ಬದಲಿ ಅಂಗಾಂಗ ಅವಶ್ಯಕತೆ ಇರುವ ರೋಗಿಗೆ ತ್ವರಿತವಾಗಿ ಅಂಗವನ್ನು ಪೂರೈಸುವ ನಿಟ್ಟಿನಲ್ಲಿ ಜೀವ ಸಾರ್ಥಕತೆ ಸಂಸ್ಥೆ ಆನ್‌ಲೈನ್‌ನಲ್ಲೇ ನೋಂದಣಿ ಮಾಡುವ ಅವಕಾಶ ಒದಗಿಸಿದೆ. ಇದಕ್ಕಾಗಿ ಆರೋಗ್ಯ ಇಲಾಖೆ 'ಜೀವ ಸಾರ್ಥಕತೆ' ಎಂಬ ವೆಬ್‌ಸೈಟ್ ಅನ್ನು ಆರಂಭಿಸಿದೆ. ಇದರಲ್ಲಿ ಹೆಸರು ನೋಂದಣಿ ಮಾಡುವ ವ್ಯಕ್ತಿ, ತನ್ನ ಮರಣಾನಂತರ ಯಾವೆಲ್ಲ ಅಂಗವನ್ನು ದಾನ ಮಾಡಲು ಸಿದ್ಧರಿದ್ದಾರೆ ಎಂಬುದನ್ನು ನಮೂದಿಸಬೇಕು. ಜೊತೆಗೆ ದಾನಿಯು ತನ್ನ ಆಧಾರ್ ಕಾರ್ಡನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು. ಇದರಿಂದ ದಾನಿಯ ಸಂಪೂರ್ಣ ಮಾಹಿತಿ ಸಿಗಲು ಅನುಕೂಲವಾಗುತ್ತದೆ' ಎಂದು ನೌಷಾದ್ ಪಾಶ ವಿವರ ನೀಡುತ್ತಾರೆ.

## ನೋಂದಾಯಿಸಿಕೊಳ್ಳುವುದು ಹೇಗೆ?

1994ರಲ್ಲಿ ಮಾನವ ಅಂಗಾಂಗ ಕಸಿ ಕಾಯಿದೆಯನ್ನು ಸರ್ಕಾರ ಜಾರಿಗೆ ತಂದಿದೆ. ಈ ಕಾಯ್ದೆಯಡಿ, ವೆಬ್‌ಸೈಟ್‌ನಲ್ಲಿ ಹೆಸರು ನೋಂದಾಯಿಸಿಕೊಳ್ಳುವುದರಿಂದ, 'ಜೀವ ಸಾರ್ಥಕತೆ'ಗೆ ದಾನಿಗಳ ಬಗ್ಗೆ ಸಂಪೂರ್ಣ ಮಾಹಿತಿ ಸಿಗುತ್ತದೆ. ಎಷ್ಟು ಮಂದಿ, ಯಾವ ಅಂಗಗಳನ್ನು ದಾನ ಮಾಡಲು ಸಿದ್ಧರಿದ್ದಾರೆ, ದಾನಿಗಳಿಂದ ಪಡೆದ ಅಂಗಗಳನ್ನು ಎಷ್ಟು ಮಂದಿ ರೋಗಿಗಳಿಗೆ ಅಳವಡಿಸಲು ಸಾಧ್ಯ ಎಂಬ ಮಾಹಿತಿ ನಿಖರವಾಗಿ ಸಿಗುತ್ತದೆ.




ಅಂಗಾಂಗ ದಾನದ ಬಗ್ಗೆ ನೋಂದಣಿ ಮಾಡಿದ ದಾನಿಗಳ ಸಂಪೂರ್ಣ ಮಾಹಿತಿಯನ್ನು ರಾಜ್ಯದ ಎಲ್ಲ ಆಸ್ಪತ್ರೆಗಳಿಗೆ ಆನ್‌ಲೈನ್ ಮೂಲಕ